# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಃ ಬೇಲೂರು

## ಃಸಿ.ಸಿ. ಸಂಖ್ಯೆ–406/2022

ಫಿರ್ಯಾದಿ ಃ ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸಿ
ಬೇಲೂರು ಪೋಲಿಸ್

ವಿರುದ್ಧ

ಆರೋಪಿತರು ಃ ಗೋಕುಲ ಮತ್ತು ಇನ್ನೊಬ್ಬರು

**ಃ ದೋಷಾರೋಪಣೆ ಃ**

1. ಶ್ರೀ ಗೋಕುಲ ಬಿನ್ ಲೇಟ್ ಬಸವರಾಜು, 35 ವರ್ಷ ವಯಸ್ಸು,
2. ಶ್ರೀ ಚಂದ್ರಶೇಖರ ಬಿನ್ ಲೇಟ್ ಬಸವರಾಜು, 39 ವರ್ಷ ವಯಸ್ಸು,

ಇಬ್ಬರೂ ಹಳೇಕೆರೆ ಗ್ರಾಮ, ಜಮ್ಮನಹಳ್ಳಿ ಅಂಚೆ, ಬೆಳಗೋಡು ಹೋಬಳಿ, ಸಕಲೇಶಪುರ ತಾಲ್ಲೂಕು.

ಈ ಕೇಸಿನಲ್ಲಿ ಆರೋಪಿಯಾಗಿರುವ ನಿಮ್ಮ ಮೇಲೆ

ಶ್ರೀ ಪ್ರಕಾಶ್ ನಾಯಕ. ಬಿ.ಎ.(ಲಾ).ಎಲ್.ಎಲ್.ಬಿ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬೇಲೂರು ಆದ ನಾನು ಈ ಕೆಳಕಂಡ ಆರೋಪವನ್ನು ಇಡುತ್ತಿದ್ದೇನೆ.

ದಿನಾಂಕಃ 28–02–2022 ರಂದು ಸಂಜೆ 5–30 ಗಂಟೆ ಸಮಯದಲ್ಲಿ ಬೇಲೂರು ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಜಿ.ಎನ್. ಎಂಟರ್ ಪ್ರೈಸಸ್ ಅಂಗಡಿ ಮುಂಭಾಗ ಚಾಸಾ–1 ರಮೇಶ ಹಾಗೂ ಚಾಸಾ–2 ಮೂಡ್ಲಗಿರಿಗೌಡರವರು ಸಮವಸ್ತ್ರದಲ್ಲಿ ಟ್ರಾಫಿಕ್ ಕರ್ತವ್ಯದಲ್ಲಿ ಇದ್ದಾಗ ಆರೋಪಿತರಾದ ನೀವುಗಳು ಸಾರ್ವಜನಿಕರ ರಸ್ತೆ ಸಂಚಾರಕ್ಕೆ ಅಡಚಣೆಯಾಗುವಂತೆ ಕೆಎ–06–ಬಿ–0656 ನಂಬರ್ ನ ಕ್ರೂಸರ್ ವಾಹನವನ್ನು ನಿಲ್ಲಿಸಿದ್ದು, ಚಾಸಾ–1 ರವರು ಇದು ಯಾರ ವಾಹನ ಸುಗಮ ಸಂಸಾರಕ್ಕೆ ಅಡಚಣೆಯಾಗುತ್ತದೆ ಇಲ್ಲಿಂದ ತೆಗೆಯಿರಿ ಎಂದು ಹೇಳಿದ್ದಕ್ಕೆ 2 ನೇ ಆರೋಪಿಯಾದ ನೀವು ನಾನು ವಾಹನವನ್ನು ತೆಗೆಯುವುದಿಲ್ಲಾ ಸ್ವಲ್ಪ ಸಮಯ ಕಾಯಿರಿ ಎಂದು ಉಡಾಫೆಯಿಂದ ಹೇಳಿದಕ್ಕೆ ಇಂದು ಸೋಮವಾರ ಸಂತೆಯಿರುವುದರಿಂದ ಹೆಚ್ಚಿನ ವಾಹನಗಳು ಚಲಿಸುತ್ತವೆ ಬೇಗ ವಾಹನ

ತೆಗೆಯಿರಿ ಎಂದು ಹೇಳಿದಕ್ಕೆ 2 ನೇ ಆರೋಪಿಯಾದ ನೀವು ಅಲ್ಲೆ ಪಕ್ಕದಲ್ಲಿ ಕುಳಿತ್ತಿದ್ದ 1 ನೇ ಆರೋಪಿಯಾದ ನೀವು ನಿಮಗೆ ಮಾಡಲು ಬೇರೆ ಕೆಲಸ ಇಲ್ಲ ಯಾವಾಗಲು ರಸ್ತೆಯಲ್ಲಿ ನಿಂತಿರುತ್ತಿರಲ್ಲ ಎಂದು ಹೇಳಿದಕ್ಕೆ ಚಾಸಾ–1 ರವರು ವಾಹನವನ್ನು ಇಲ್ಲಿಂದ ತೆಗೆಯದಿದ್ದರೆ ದಂಡ ವಿಧಿಸಬೇಕಾಗುತ್ತದೆ ಎಂದು ಹೇಳಿದ್ದಕ್ಕೆ ಆರೋಪಿತರಾದ ನೀವುಗಳು ನಾವು ದಂಡ ಕಟ್ಟುವುದಿಲ್ಲಾ ಲೋಫಾರ್ ಪೋಲೀಸರೇ, ಲೋಫರ್ ನನ್ನ ಮಕ್ಕಳಾ ಅದೇನು ಕಿತ್ತುಕೊಳ್ಳುತ್ತೀರಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ಸಾರ್ವಜನಿಕ ಶಾಂತಿಗೆ ಭಂಗವನ್ನುಂಟು ಮಾಡಿದ್ದು, ಭಾರತೀಯ ದಂಡ ಸಂಹಿತೆ ಪ್ರಕರಣ 504 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಹಲ್ಲೆ ಮಾಡುವ ಸಮಾನ ಉದ್ದೇಶವನ್ನು ಹೊಂದಿದ್ದು, ಆರೋಪಿತರ ಪೈಕಿ 1 ನೇ ಆರೋಪಿಯಾದ ನೀವು ವಾಹನದಿಂದ ಇಳಿದು ಬಂದು ಕೈಯಿಂದ ಚಾಸಾ–1 ರವರಿಗೆ ಕುತ್ತಿಗೆ ಮೇಲೆ ಹೊಡೆದು ಸ್ವಯಂಪ್ರೇರಿತಾ ಸಾಧಾರಣದ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಪ್ರಕರಣ 323 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಹಲ್ಲೆ ಮಾಡುವ ಸಮಾನ ಉದ್ದೇಶವನ್ನು ಹೊಂದಿದ್ದು, ಆರೋಪಿತರ ಪೈಕಿ 2 ನೇ ಆರೋಪಿಯಾದ ನೀವು ಕೈಯಲ್ಲಿದ್ದ ಕೀ ಯಿಂದ ಚಾಸಾ–1 ರವರ ತಲೆಗೆ ಕುಕ್ಕಿ ಸ್ವಯಂಪ್ರೇರಿತಾ ಸಾಮಾನ್ಯ ಸ್ವರೂಪದ ರಕ್ತಗಾಯಪಡಿದ್ದು, ಕಾರಣ , ಭಾರತೀಯ ದಂಡ ಸಂಹಿತೆ ಪ್ರಕರಣ 324 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಹಲ್ಲೆ ಮಾಡುವ ಸಮಾನ ಉದ್ದೇಶವನ್ನು ಹೊಂದಿದ್ದು, ಆರೋಪಿತರಾದ ನೀವು ಚಾಸಾ1 ಮತ್ತು 2

ರವರಿಗೆ ಸರ್ಕಾರಿ ಕರ್ತವ್ಯ ನಿರ್ವಹಿಸದಂತೆ ಅಡ್ಡಿಪಡಿಸಿ, ಭಾರತೀಯ ದಂಡ ಸಂಹಿತೆ ಪ್ರಕರಣ 353 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಹಲ್ಲೆ ಮಾಡುವ ಸಮಾನ ಉದ್ದೇಶವನ್ನು ಹೊಂದಿದ್ದು, ಆರೋಪಿತರಾದ ನೀವುಗಳು ಸಾರ್ವಜನಿಕ ರಸ್ತೆ ಸಂಚಾರಕ್ಕೆ ಅಡಚಣೆಯನ್ನುಂಟಾಗುವಂತೆ ವಾಹನ ನಿಲ್ಲಿಸಿದ್ದು, ಭಾರತೀಯ ದಂಡ ಸಂಹಿತೆ ಪ್ರಕರಣ 283 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಹಲ್ಲೆ ಮಾಡುವ ಸಮಾನ ಉದ್ದೇಶವನ್ನು ಹೊಂದಿದ್ದು, ಆರೋಪಿತರಾದ ನೀವುಗಳು ಸಾರ್ವಜನಿಕ ಸೇವಕನನ್ನು ತನ್ನ ಕರ್ತವ್ಯದಿಂದ ಹಿಮ್ಮೆಟ್ಟಿಸಲು ಸ್ವಯಂಪ್ರೇರಣೆಯಿಂದ ನೋವುಂಟು ಮಾಡಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಪ್ರಕರಣ 332 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

(ಮೇಲ್ಕಂಡ ದೋಷಾರೋಪಣೆಯ ಮೇಲೆ ನಿಮ್ಮನ್ನು ಈ ನ್ಯಾಯಾಲಯದ ವಿಚಾರಣೆಗೆ ಗುರಿಪಡಿಸಿರುತ್ತೇನೆ ಎಂದು ಈ ಮೂಲಕ ನಿ ರ್ದೇಶಿಸುತ್ತೇನೆ)

ಸ್ಥಳ : ಬೇಲೂರು
ದಿನಾಂಕ: 03-10-2022

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು